ಕರ್ನಾಟಕ ಸರ್ಕಾರ

ಸಂಖ್ಯೆ: ಡಿಪಿಎ 15 ಎಆರ್‌ಬಿ 93.

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ: 14-12-1993.

## ಸುತ್ತೋಲೆ

ವಿಷಯ : ಸರ್ಕಾರಿ ನೌಕರರನ್ನು ಒಂದು ಇಲಾಖೆಯಿಂದ ಇನ್ನೊಂದು ಇಲಾಖೆಗೆ ನಿಯೋಜನೆ ಬಗ್ಗೆ ಸಮಾಲೋಚನೆಯ ಪ್ರಕ್ರಿಯೆ ಮತ್ತು ಸೂಚನೆಗಳ ಬಗ್ಗೆ.

ಉಲ್ಲೇಖ : 1) ಸುತ್ತೋಲೆ ಸಂಖ್ಯೆ: ಡಿಪಿಎ 16 ಎಆರ್‌ಬಿ 81, ದಿನಾಂಕ 18-11-81;

2) ಸುತ್ತೋಲೆ ಸಂಖ್ಯೆ: ಡಿಪಿಎ 10 ಎಆರ್‌ಬಿ 89, ದಿನಾಂಕ 20-11-89;

3) ಸುತ್ತೋಲೆ ಸಂಖ್ಯೆ: ಡಿಪಿಎ 14 ಎಆರ್‌ಬಿ 90, ದಿನಾಂಕ 6-3-91;

4) ಸುತ್ತೋಲೆ ಸಂಖ್ಯೆ: ಡಿಪಿಎ 14 ಎಆರ್‌ಬಿ 93, ದಿನಾಂಕ 6-10-93.

—:—:—

ಸರ್ಕಾರಿ ನೌಕರರ ಸೇವೆಯನ್ನು ಪ್ರತಿನಿಯೋಜನೆಯ ಮೇಲೆ ಒಂದು ಇಲಾಖೆಯಿಂದ ಇನ್ನೊಂದು ಇಲಾಖೆಗೆ ವಹಿಸಿಕೊಡುವಾಗ ಅನುಸರಿಸಬೇಕಾದ ಕಾರ್ಯವಿಧಾನಗಳ ಬಗ್ಗೆ ಉಲ್ಲೇಖಿತ ಸುತ್ತೋಲೆಗಳಲ್ಲಿ ಕಾಲಕಾಲಕ್ಕೆ ಸೂಚನೆಗಳನ್ನು ಹೊರಡಿಸಲಾಗಿದೆ.

2) ಮೇಲ್ಕಂಡ ಸೂಚನೆಗಳು ಇದ್ದಾಗ್ಯೂ ಕೂಡ, ಇತ್ತೀಚೆಗೆ ಲೋಕೋಪಯೋಗಿ ಇಲಾಖೆಯಿಂದ ನೀರಾವರಿ ಇಲಾಖೆ, ವಸತಿ ಮತ್ತು ನಗರಾಭಿವೃದ್ಧಿ ಇಲಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಮತ್ತಿತರೆ ಇಲಾಖೆಗಳಿಗೆ ಪ್ರತಿನಿಯೋಜಿಸಲ್ಪಟ್ಟ ಅಭಿಯಂತರರನ್ನು ಜಾಗ್ರತೆ ಸೇಮಕಾತಿ ಆದೇಶ ಹೊರಡಿಸದೆ ಇರುವುದರಿಂದ, ಅವರುಗಳು ಮತ್ತೆ ಇಲಾಖೆಗೆ ಮರು ನೇಮಕಾತಿ ಆದೇಶ ನೀಡುವಂತೆ ಕೋರಿದ್ದು ಮತ್ತು ಈ ಅಧಿಕಾರಿಗಳು ಕಡ್ಡಾಯ ನಿರೀಕ್ಷಣೆಯಲ್ಲಿ ಉಳಿಯಬೇಕಾದ ಪರಿಸ್ಥಿತಿ ಇದೆ. ಇವರ ಸೇವೆಯನ್ನು ಪೂರ್ಣ ಪ್ರಮಾಣದಲ್ಲಿ ಬಳಸದೆ, ವೇತನ ನೀಡುವುದರಿಂದ ಸರ್ಕಾರಕ್ಕೆ ನಷ್ಟ ಉಂಟಾಗುವ ಪ್ರಕರಣ ಸರ್ಕಾರದ ಗಮನಕ್ಕೆ ಬಂದಿರುತ್ತದೆ.

3) ಆದುದರಿಂದ, ಈ ಸೂಚನೆಗಳನ್ನು ಕಡ್ಡಾಯವಾಗಿ ಮತ್ತು ಕಟ್ಟುನಿಟ್ಟಾಗಿ ಪಾಲಿಸಲು ಆದೇಶಿಸಿದೆ. ಈ ಸೂಚನೆಗಳನ್ನು ಉಲ್ಲಂಘಿಸಿದ ಅಧಿಕಾರಿಗಳ ಮೇಲೆ ಶಿಸ್ತಿನ ಕ್ರಮ ಜರುಗಿಸಲಾಗುವುದು. ಈ ರೀತಿ ಪ್ರತಿನಿಯೋಜಿಸಿದ ಅಧಿಕಾರಿಗಳಿಗೆ ಕಡ್ಡಾಯ ನಿರೀಕ್ಷಣೆ ಮಾಡಲು ಕಾರಣರಾದ ಸಂಬಂಧಪಟ್ಟ ಅಧಿಕಾರಿಗಳ ವೇತನದಿಂದ ಸರ್ಕಾರಕ್ಕೆ ಆದ ನಷ್ಟವನ್ನು ಮುರಿದುಕೊಳ್ಳಲಾಗುವುದು ಎಂದೂ ಸಹ ಆದೇಶಿಸಿದೆ.

(ಜಾ.ಕ್ರಿ.ಲಿನ್)
ಸರ್ಕಾರದ ಮುಖ್ಯ ಕಾರ್ಯದರ್ಶಿ.

ಇವರಿಗೆ :—

1) ಸರ್ಕಾರದ ಎಲ್ಲಾ ಆಯುಕ್ತರು ಮತ್ತು ಕಾರ್ಯದರ್ಶಿಗಳು;
2) ಎಲ್ಲಾ ಇಲಾಖಾ ಮುಖ್ಯಸ್ಥರುಗಳು;
3) ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ;
4) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ...